ಆಗ ನಮಗೆ ಸಾಕಷ್ಟು ಸಿಟ್ಟು ಬರುತ್ತದೆ. ಆದರೆ ಬಡವನ ಸಿಟ್ಟು ದವಡೆಗೆ ಮೂಲ ಎಂದು ಎಲ್ಲವನ್ನೂ ಸಹಿಸಿಕೊಳ್ಳುತ್ತೇವೆ. ದೇವರ ದಯೆ, ಮನುಷ್ಯ ಏನೆಲ್ಲ ಪ್ರಯತ್ನಿಸಿದರೂ ನಮ್ಮನ್ನು ಇನ್ನೂ ಪೂರ್ತಿಯಾಗಿ ಸಂಹರಿಸಲಿಕ್ಕಾಗಿಲ್ಲ, ಆಗುವುದೂ ಇಲ್ಲ. ನಮಗೆ ಸೃಷ್ಟಿಕರ್ತನ ರಕ್ಷಣೆ ಇದೆ.

ನಮ್ಮ ಮನೆಯ ಯಜಮಾನ ತುಂಬಾ ಒಳ್ಳೆಯವ. ಆತ ಓದುವುದು, ಬರೆಯುವುದರಲ್ಲಿ ಮಗ್ನವಾದಾಗ ನಮಗೆ ಸ್ವಲ್ಪ ಆಹಾರ ಸಿಗುತ್ತದೆ. ನಾವು ರಕ್ತ ಹೀರಿದರೂ ಆತ ಹಾಗೆ ಕೆರೆದುಕೊಳ್ಳುತ್ತ ತನ್ನ ಕೆಲಸದಲ್ಲಿ ನಿರತನಾಗಿರುತ್ತಾನೆ. ಅವನಿಗೂ ಕೂಡ ಮನೆಯವರು ಮೊನ್ನೆ ಅದೇನೋ ಎಲೆಕ್ಟ್ರಿಕ್ ಬ್ಯಾಟ್ ಅಂತೆ – ಅದನ್ನು ತಂದು ಕೊಟ್ಟಿದ್ದಾರೆ. ಗದೆಯಂತೆ ಪ್ರಹಾರ ಮಾಡಿ ಅದರಿಂದ ಚಟ್ ಪಟ್ ಅಂತ ನಮ್ಮ ಕೆಲವು ದಾಯಾದಿಗಳನ್ನು ಆತ ಮೊನ್ನೆ ಕೊಂದು ಕೇಕೇ ಹಾಕಿದ. ಅದನ್ನು ನೋಡಿ ಹೆದರಿಕೆ ಆಗುತ್ತಿದೆ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ. ಅದಕ್ಕೂ ಒಂದು ಉಪಾಯವನ್ನು ನಾವೀಗ ಹುಡುಕಿಕೊಳ್ಳಬೇಕು. ಇಲ್ಲದಿದ್ದರೆ ನಮಗೆ ಉಳಿಗಾಲವಿಲ್ಲ. ಈ ಮನುಷ್ಯನಿಗೆ ಇತರರನ್ನು ಕೊಲ್ಲಲು, ಪೀಡಿಸಲು ಪಾಪಪ್ರಜ್ಞೆ ಎಂಬುದೇ ಇಲ್ಲ! ಇತರ ಜೀವಿಗಳ ಬಗ್ಗೆ ಕನಿಕರ ಇಲ್ಲ. ಹರ ಮುನಿದರೆ ಗುರು ಕಾಯುವನಂತೆ, ಮನುಷ್ಯ ಮುನಿದರೆ ದೇವರು ಕಾಯಲಾರನೆ? ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ ಅನ್ನುವ ವಿಶ್ವಾಸ ನಮಗೆ ಇದೆ.

ಆದರೂ ಒಮ್ಮೊಮ್ಮೆ ಆತಂಕವಾಗುತ್ತದೆ. ನಮ್ಮ ರಕ್ತ ಸಂಬಂಧಿಗಳು, ಮನುಷ್ಯಾವಲಂಬಿಗಳೂ ಆದ ತಿಗಣೆ, ಹೇನು, ಕೂರೆ ಇವುಗಳ ವಂಶವನ್ನು ಈ ಮನುಷ್ಯ ನಿರ್ವಂಶವಾಗಿವೆಯೇನೋ ಅನ್ನುವಷ್ಟು ನಾಶ ಮಾಡಿದ್ದಾನೆ. ನಮ್ಮಂತೆ ಹಾರಲು ಬಾರದ ಕ್ಷುದ್ರಜೀವಿಗಳು ಅವು. ಹೀಗಾಗಿ ಅವುಗಳ ಸಂಹಾರಕ್ಕೆ ಸೋಪು, ಶ್ಯಾಂಪೂ, ನಾಶಕಗಳನ್ನು ಬಳಸಿ ಸಂಹರಿಸುತ್ತ ಬಂದಿದ್ದಾನೆ. ಆದರೂ ಅವುಗಳನ್ನೂ ಸಾಕಿ ಸಲಹುವ, ಆಶ್ರಯ ನೀಡುವ ಪುಣ್ಯವಂತ ಜನ ಇದ್ದೇ ಇರುತ್ತಾರೆ. ನಮಗೆ ಮನೆಯ ಒಳಗಡೆ, ಹೊರಗಡೆ ಹಾರುವ, ಹೋಗಿ ಬರುವ ಸ್ವಾತಂತ್ರ್ಯ ಇದೆ. ಸಾಕಿ ಸಲಹುವ ತಾಣಗಳಂತೂ ಇದ್ದೇ ಇರುತ್ತವೆ. ಮನೆಗಳ ಸುತ್ತಮುತ್ತ ಅಲ್ಲಲ್ಲಿ ಮಲೆತು ನಿಂತ ನೀರು, ಚರಂಡಿಗಳು, ಮಾಲಿನ್ಯ ಭರಿತ ತಾಣಗಳಿಗೆ ಕೊರತೆ ಇಲ್ಲ. ಆದ್ದರಿಂದ ಮನುಷ್ಯ ನಮ್ಮನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಸಾಧ್ಯವೇ ಇಲ್ಲ. ನಮ್ಮಿಂದಾಗಿ ಬದುಕು ಕಟ್ಟಿಕೊಂಡವರು ಎಷ್ಟೋ ಜನ.

ನಮ್ಮ ವಿನಾಶಕ್ಕಾಗಿ ನಾಶಕಗಳನ್ನು ತಯಾರಿಸುವ, ಉಪಕರಣಗಳನ್ನು ತಯಾರಿಸಿ ಮಾರುವ ದೊಡ್ಡ ಉದ್ದಿಮೆಯೇ ಇದೆ. ಅದೊಂದು ಸಾವಿರಾರು ಕೋಟಿ ರೂಪಾಯಿ ಉದ್ಯಮ. ಇಡೀ ಆರೋಗ್ಯ ವ್ಯವಸ್ಥೆ ನಿಂತಿರುವುದೇ ನಮ್ಮ ಮೇಲೆ. ವೈದ್ಯರಿಗೆ ನಾವಿಲ್ಲದಿದ್ದರೆ ಅರ್ಧದಷ್ಟು ರೋಗಿಗಳು ಇರುವುದಿಲ್ಲ. ಔಷಧ ತಯಾರಿಸುವ ಕಂಪನಿಗಳು ಮುಚ್ಚಿ ಹೋಗುತ್ತವೆ. ಅವರದು ಎಷ್ಟೋ ಸಾವಿರ ಕೋಟಿ ಉದ್ಯಮ. ಆರೋಗ್ಯ ಇಲಾಖೆಯವರು ನಮ್ಮ ಹೆಸರು ಹೇಳುತ್ತಾ ತಮ್ಮ ಬದುಕು ಕಟ್ಟಿಕೊಳ್ಳುತ್ತಾರೆ. ನಮ್ಮ ಮೇಲ್ವಿಚಾರಣೆಗೆ ಎಷ್ಟೊಂದು ಜನರಿಲ್ಲ! ನಾವು ಮನುಷ್ಯರಿಗೆ ಇಷ್ಟೆಲ್ಲ ಉಪಕಾರ ಮಾಡಿದರೂ ಮನುಷ್ಯ ಯಾವತ್ತೂ ನಮ್ಮನ್ನು ಕೊಲ್ಲಲು ಹವಣಿಸುತ್ತಾನೆ. ಕೃತಘ್ನತೆಗೆ ಶಿಕ್ಷೆ ಎಂಬುದಿಲ್ಲ. ನಮ್ಮಿಂದಾಗಿಯೇ ಇವರಿಗೆಲ್ಲ ಅಸ್ತಿತ್ವ. ನಾವಿಲ್ಲದಿದ್ದರೆ ಅವರ ಅಸ್ತಿತ್ವಕ್ಕೇ ಧಕ್ಕೆ.

ಈ ಭೂಮಿಯ ಮೇಲೆ ಹುಟ್ಟಿದ ಎಷ್ಟೋ ಜೀವಿಗಳು ಹೇಳ ಹೆಸರಿಲ್ಲದಂತೆ ನಿರ್ನಾಮಗೊಂಡಿವೆ ಎಂದು, ಕೆಲವು ಅಳಿವಿನಂಚಿನಲ್ಲಿ ಇವೆ ಎಂದು ಟೀವಿಯಲ್ಲಿ ಆಗಾಗ ಮಾತನಾಡುವುದನ್ನು ಕೇಳಿದ್ದೇನೆ. ಅವರಾರು ನಮ್ಮ ಅಳಿವಿನ ಬಗ್ಗೆ ಮಾತನಾಡುವುದಿಲ್ಲ. ಕೇವಲ ನಮ್ಮ ನಿಯಂತ್ರಣದ ಬಗ್ಗೆ ಮಾತನಾಡುತ್ತಾರೆ. ನಾವು ಜನಿಸಲೇ ಬಾರದೆಂದು, ಅದಕ್ಕಾಗಿ ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳುತ್ತಾರೆ. ನಮ್ಮ ಉಪಟಳ ತಡೆಯಲು ಪರದೆ ಬಳಸುವುದೇ ಸೂಕ್ತವೆಂದು ಮೊನ್ನೆ ಒಬ್ಬರು ಹೇಳುತ್ತಿದ್ದರು. ಆ ವಿಷಕಾರಿ ಔಷಧಗಳಿಗಿಂತ ಅದೇ ವಾಸಿಯಂತೆ. ಅದು ನಮಗೂ ಕ್ಷೇಮವೇ. ಬದುಕಿದ್ದರೆ ರಾತ್ರಿ ಅಲ್ಲದಿದ್ದ್ರೂ ಹಗಲು ಹೊತ್ತಾದರೂ ನಾವು ಹೇಗೋ ಹೊಟ್ಟೆ ಹೊರೆಯಬಹುದು. ಅಪಾರ ಜನಸಂಖ್ಯೆಯುಳ್ಳ ಈ ದೇಶದಲ್ಲಿ ನಮಗೆ ಬದುಕಲಾಗದಿದ್ದರೆ ಇನ್ನೆಲ್ಲಿ ಬದುಕಲು ಸಾಧ್ಯ, ಹೇಳಿ. ಏನೇ ಬರಲಿ ಆ ಪರಶಿವನ ದಯೆಯೊಂದಿರಲಿ ಎಂಬುದೇ ನಮ್ಮ ಪ್ರಾರ್ಥನೆ. ●